SRI A. LAKSHMISAGAR.—The corrected statement of DCB is given to me just now. I want some time to study it and put supplementary questions.

MR. SPEAKER.—You want the question to be held over?

SRI A LAKSHMISAGAR.—Yes.

MR. SPEAKER.—Shall we take up the question tomorrow or day after tomorrow?

SRI A. LAKSHMISAGAR.—We shall have it day after tomorrow.

MR. SPEAKER.—I hold over this question.

Alleged attack on Press by Youth Congress (I) Workers

352 P. RAMDEV (Malleswaram).—Will the Chief Minister be pleased to state.—

(a) whether it is a fact that on 21-9-1980, some Youth Congress (I) workers resorted to gherao of Deccan Herald, Prajavani, Indian Express and Kannada Prabha Offices.

(b) if so, he action taken by Government to prevent the same?

SHRI R. GUNDU RAO (Chief Minister).—

(a) There was no gherao on 21-9-1980. However on night of 22-9-1980 at about 9.30 p.m. about 100 Youth Congress (I) workers each came to Deccan Herald and Indian Express Offices in two groups and shouted slogans protesting against the news papers for having published incorrect news in their issues dated 22-9-1980 and did not allow the inmates to move out of the premises.

(b) On a complaint lodged in this connection, a case in Cubbon-park P.S. Cr. No. 510/80 under sections 143, 147, 149 and 341 IPC was registered and after due investigation the case was chargesheeted against ten accused persons. The case ended in conviction and each of these ten accused persons were sentenced to pay a fine of Rs. 150. The accused paid the fine.

ಶ್ರೀ ಪಿ. ರಾಂದೇವ್.—ದಿನಾಂಕ ೨೨-೯-೧೯೮೦ರಂದು ರಾತ್ರಿ ಸುಮಾರು ೯-೩೦ರ ಸಮಯದಲ್ಲಿ ಘೆರಾವ್ ಪ್ರಾರಂಭವಾಯಿತೆಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ.

ಅಧ್ಯಕ್ಷರು.—ಘೆರಾವ್ ಮಾಡಲಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ.ಷ್ಟೆ

ಶ್ರೀ ಪಿ. ರಾಂದೇವ್.—ಸರಿ. ದಿಗ್ಬಂಧನ ಎನ್ನೋಣ. ರಾತ್ರಿ ೯-೩೦ ಗಂಟೆಯಿಂದ ಎಷ್ಟು ಗಂಟೆಯವರೆಗೆ ಪತ್ರಿಕಾ ಕಛೇರಿಗಳ ಮೇಲೆ ದಿಗ್ಬಂಧನ ನಡೆಯಿತು?

ಶ್ರೀ ಆರ್. ಗುಂಡೂರಾವ್.—ಬಹಳ ಹೊತ್ತಿನವರೆಗೆ ನಡೆದಿದೆ. ಪೋಲೀಸರು ಬಂದು ಆವರ್ನಲ್ಲನೆ ಬಂಧಿಸಿ, ಕೇಸನ್ನು ರಿಜಿಸ್ಟರ್ ಮಾಡಿಕೊಂಡು, ಚಾರ್ಜ್‌ಷೀಟ್ ಹಾಕಿ, ದಂಡ ವಿಧಿಸಿದ್ದಾರೆ.

ಶ್ರೀ ಪಿ. ರಾಂದೇವ್.—ಘೇರಾವ್ ಆದ ದಿವಸ ತಾವು ಮಂಗಳೂರಿನಲ್ಲಿದ್ದೀರಿ. ಅಲ್ಲಿನ ಸಭೆಯೊಂದರಲ್ಲಿ ತಾವು ಮಾತನಾಡುತ್ತಾ The day will come when Congress (I) workers would gherao those who are circulating false news ಎಂದು ಹೇಳಿದಿರಿ Is it the consequence of your speech?

SRI R. GUNDU RAO.—It has no relevance.

ಶ್ರೀ ಪಿ. ರಾಂದೇವ್.—ಅವತ್ತು ರಾತ್ರಿ ೯-೩೦ ಗಂಟೆಯಿಂದ ಬೆಳಿಗ್ಗೆ ೮-೦೦ ಗಂಟೆವರೆಗೆ ದಿಗ್ಬಂಧನ ನಡೆದಿದೆ. ಹೀಗೆ ಸುಮಾರು ಹನ್ನೆರಡು ಗಂಟೆಗಳ ಕಾಲ ನಡೆದ ಮುತ್ತಿಗೆ ಸಂದರ್ಭದಲ್ಲಿ ನಗರದ ಪೋಲೀಸ್ ಕಮೀಷನರ್ ಮತ್ತು, ಐ.ಜಿ.ಪಿ.ಯವರನ್ನು ಸಂಪರ್ಕಿಸಿದಾಗ, ಅವರು ಅಸಹಾಯಕರೆಂಬ ಮಾತನ್ನು ಹೇಳಿದ್ದಾರೆ. Then the press people contacted the Central Government authorities including the Government. And it was said that Sri Jaffer Sherief and Sri G. Y. Krishnan both talked to the Prime Minister as well as to the Government. ನಂತರ ದಿಗ್ಬಂಧನ ಕೊನೆಯಾಯಿತೆಂದು ಗೊತ್ತಾಗಿದೆ. ಈ ಬಗ್ಗೆ ಗೃಹ ಖಾತೆಯನ್ನೂ ವಹಿಸಿಕೊಂಡಿರುವ ಮಾನ್ಯ ಮುಖ್ಯ ಮಂತ್ರಿಗಳು ಏನು ಮಾಡಲಿಲ್ಲ, ಸುಮ್ಮನೆ ಕುಳಿತಿದ್ದರೆನ್ನುವುದು ನಿಜವೆ?

SRI R. GUNDU RAO —It is not correct anyway.

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜಧಾನಿಯಾದ ಬೆಂಗಳೂರಿನಲ್ಲಿ ಸುಮಾರು ೯-೩೦ ಗಂಟೆಗೆ ಈ ಘಟನೆ ನಡೆದಾಗ ಪತ್ರಿಕೆಯವರು ಕೂಡಲೇ ಐ.ಜಿ.ಪಿ. ಮತ್ತು ಇತರ ಸಂಬಂಧಪಟ್ಟ ಅಧಿಕಾರಿಗಳೊಡನೆ ಸಂಪರ್ಕ ಬೆಳೆಸಿದ್ದಾರೆ. ಆದರೂ, ಪತ್ರಿಕಾಲಯಗಳ ಮೇಲಿನ ಮುತ್ತಿಗೆ ಮುಗಿಯದೆ ಅವು ಸುಗಮ ರೀತಿಯಲ್ಲಿ ಕೆಲಸ ಮಾಡದೆ ಇರತಕ್ಕ ಪೋಲೀಸ್ ಅಧಿಕಾರಿಗಳು ಪ್ರಯತ್ನ ಮಾಡದಿರುವುದಕ್ಕೆ ಇದ್ದ ಕಾರಣವೇನು?

ಶ್ರೀ ಆರ್. ಗುಂಡೂರಾವ್.—ಮಾಡಿದ್ದಾರೆ. ಎರಡೂ ಕಡೆಯವರನ್ನು ಕರೆದು ಸಮಾಲೋಚನೆ ಮಾಡಿ, ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ನೋಡಿಕೊಂಡು, ನಂತರ ಕೆಲವರ ಮೇಲೆ ಚಾರ್ಜ್‌ಷೀಟ್ ಹಾಕಿ ಕ್ರಮ ಕೈಗೊಂಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪತ್ರಿಕೆಗಳು ಅಂದು ಪತ್ರಿಕಾಲಯ ಬಿಟ್ಟು ಹೊರಗಡೆಗೆ ಹೋಗಲಾಗಲಿಲ್ಲ. It is a wrongful confinement and prevention of the Press working freely. ಅಲ್ಲವೆ? ಇಂತಹ ಒಂದು ಮಹತ್ತರ ಘಟನೆ ನಡೆದಾಗ ಮತ್ತು ಸಂಬಂಧಪಟ್ಟವರ ದೂರು ಕೊಟ್ಟಾಗ ಕೂಡಲೇ ಪೋಲೀಸ್ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿತಲ್ಲವೆ? ಅದು ಬಿಟ್ಟು ೧೨ ಗಂಟೆಗಳ ಕಾಲ ತಡ ಮಾಡಿದ್ದರ ಕಾರಣವೇನು? ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ರಾಜಕೀಯ ಒತ್ತಡ ಆಡ್ಡ ಬಂದಿತ್ತೆಂದು ಇದರಿಂದ ಸ್ಪಷ್ಟವಾಗಿ ಅರ್ಥವಾಗುವುದಿಲ್ಲವೆ?

ಶ್ರೀ ಆರ್. ಗುಂಡೂರಾವ್.—ತಮ್ಮ ಅಭಿಪ್ರಾಯ ಸರಿಯಲ್ಲ.

ಶ್ರೀ ಎ. ಚಂದ್ರಶೇಖರ್.—ಈ ಪ್ರಕರಣದ ತನಿಖೆ ನಡೆಸುತ್ತಿದ್ದ ಡಿ.ಸಿ.ಪಿ. (ಕ್ರೈಂ) ಅಧಿಕಾರಿಯನ್ನು, ಅವರು ಕೊಡುವ ವರದಿ ಸರ್ಕಾರಕ್ಕೆ ಅಥವಾ ಪಕ್ಷಕ್ಕೆ ವ್ಯತಿರಿಕ್ತವಾಗಿರುತ್ತದೆಂದು ಭಾವಿಸಿ ಬದಲಾವಣೆ ಮಾಡಲಾಗಿದೆ ಎಂದು ಗೊತ್ತಾಗಿದೆ. ಇದಕ್ಕೆ ಸರ್ಕಾರ ಏನು ಉತ್ತರ ಕೊಡುತ್ತದೆ?

ಶ್ರೀ ಆರ್. ಗುಂಡೂರಾವ್.—ಆದಕ್ಕೋಸ್ಕರ ಅವರನ್ನು ಬದಲಾವಣೆ ಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಆ ದಿವಸ ಪತ್ರಿಕೆಗಳ ಕಛೇರಿಗಳ ಮುಂದೆ ಹೋಗಿ, ಗೇಟನ್ನು ಹಾಕಿ, ಪತ್ರಿಕೆಗಳು ಹೊರಗೆ ಬರದ ಹಾಗೆ ತಡೆಹಿಡಿದ ಸನ್ನಿವೇಶವಿತ್ತೆಂದು ಸರ್ಕಾರ ಒಪ್ಪಿಕೊಂಡಿದೆ. ಆ ರಾತ್ರಿ ನನಗೆ, ಯಾವ ಯಾವ ಪತ್ರಿಕಾಲಯಗಳಲ್ಲಿ ಈ ಘಟನೆ ನಡೆಯಿತೋ ಅಲ್ಲಿಂದ ದೂರವಾಣಿ ಕರೆಗಳು ಬಂದು, ಸಹಾಯ ಮಾಡಿ ಎಂದು ಕೇಳಲಾಯಿತು. ನಾನು ಅದರಂತೆ ಹೇಳುವವರಿಗೆಲ್ಲಾ ಹೇಳಿದ್ದಾಯಿತು ಈ ಘಟನೆ ನಡೆದಿರುವುದು ನಿಜವೋ ಅಥವಾ ಸುಳ್ಳೋ ಎಂದು ತಿಳಿದುಕೊಳ್ಳಲು ನಾನು ಬೆಳಿಗ್ಗೆ ಎದ್ದು ಪತ್ರಿಕಾಲಯಗಳ ಕಛೇರಿಗೆ ಹೋಗಿ ನೋಡಿದಾಗ, ಇನ್ನೂ ಅಲ್ಲೇ ಈ ಜನ ನಿಂತಿದ್ದರು. ಹೀಗಿರುವಾಗ,

ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾದ ಪೋಲೀಸರು ತಕ್ಷಣ ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ನಂತರ ಅವರ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹಾಕಿರುವುದು, ಅಲ್ಲಿ ಅವರಿಗೆ ಜುಲ್ಮಾನೆ ವಿಧಿಸಿರುವುದು ಬೇರೆ ವಿಚಾರ. ಘಟನೆ ನಡೆದ ಸಂದರ್ಭದಲ್ಲಿ ತಕ್ಷಣ ಸ್ಥಳಕ್ಕೆ ಹೋಗಿ ಪೋಲಿಸ್ ಅಧಿಕಾರಿಗಳು ಕಾನೂನು ಪ್ರಕಾರ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ಪತ್ರಿಕೆಗಳು ಯಥಾ ವಿಧಿಯಾಗಿ ಆಯಾಯಾ ಜಾಗಗಳಿಗೆ ಹೋಗಲು ಅವಕಾಶವನ್ನು ಪೋಲಿಸ್ ಅಧಿಕಾರಿಗಳು ಏತಕ್ಕೆ ಮಾಡಿಕೊಡಲಿಲ್ಲ? ಇದಕ್ಕೆ ಸರ್ಕಾರದ ಉತ್ತರವೇನು?

ಶ್ರೀ ಆರ್. ಗುಂಡೂರಾವ್.—ಕ್ರಮ ಕೈಗೊಂಡಿರುವುದಕ್ಕೆ ಕೆಲವರಿಗೆ ನ್ಯಾಯಾಲಯದಲ್ಲಿ ದಂಡ ವಿಧಿಸಿರುವುದು.

SRI A. LAKSHMISAGAR.—It is not an answer to my question. There was admittedly the seize on the Press by some people. Not it was bounden duty of the local police to take action and remove the obstructors immediately and it is also an admitted fact that the papers could not be sent to their destinations throughout the State. What prevented the people from taking the action? Were the police personnel prevented from taking the action immediately or the police neglected to do so? If that is so, if the Police neglected to take prompt action what action should be taken and if so, what action has been taken for negligence on the part of the Police by the Government?

ಶ್ರೀ ಆರ್. ಗುಂಡೂರಾವ್.—ನಾನು ಮೊದಲೇ ಹೇಳಿದ ಹಾಗೆ ಹಿಂಸಾಚಾರಕ್ಕೆ ಎಡೆಕೊಡ ಬಾರದೆಂದು.....

ಶ್ರೀ ಎ. ಲಕ್ಷ್ಮೀಸಾಗರ್.—ಕರ್ತವ್ಯಲೋಪ ಮಾಡಿದ್ದಕ್ಕಾಗಿ ಪೋಲಿಸರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

SRI R. GUNDU RAO.—It does not arise.

SRI A. LAKSHMISAGAR.—Why? It is the failure on the part of the police. Why action was not initiated by the Government for gross negligence and criminal negligence?

SRI B. B. SAYANAK.—Whether it is a fact that the Police of the Raj Bhavan has gone for the protection of the Deccan Herald and Indian Express?

SRI R. GUNDU RAO. That, I do not know.

ಶ್ರೀ ಟಿ. ರಾಮದೇವ್.—ತಾವು ಈ ರಾಜ್ಯದ ಗೃಹಮಂತ್ರಿಗಳೂ ಆಗಿದ್ದೀರಿ. ತಮ್ಮ ಕಾಲದಲ್ಲಿ ಪತ್ರಿಕಾ ಕಛೇರಿಗಳ ಮೇಲೆ ಸುಮಾರು ಪನ್ನೆರಡು ಗಂಟೆಗಳ ಕಾಲ ದಿಗ್ಬಂಧನ ಹಾಕಲಾಗಿದೆ. ಈ ರಾಜ್ಯದ ಯಾವ ಮೂಲೆಯಲ್ಲಿ ಏನಾದರೂ ತಮಗೆ ತಕ್ಷಣ ಸಮಾಚಾರ ಬರುತ್ತದೆ. ಆಂತೆಯೇ, ಈ ಬಗ್ಗೆಯೂ ತಮಗೆ ಸುದ್ದಿ ಬಂದ ತಕ್ಷಣ ತಾವು ಕ್ರಮ ತೆಗೆದುಕೊಳ್ಳುವುದರಲ್ಲಿ ವಿಫಲರಾಗಿದ್ದೀರೆಂದು ವ್ಯಕ್ತವಾಗುತ್ತದೆ. ಆದುದರಿಂದ, ಇನ್ನು ಮುಂದಾದರೂ ಹೀಗಾಗದಂತೆ ನೋಡಿಕೊಳ್ಳುವಿರಾ?

ಶ್ರೀ ಆರ್. ಗುಂಡೂರಾವ್.—ಕ್ರಮ ಕೈಗೊಳ್ಳಲಾಗಿರುವುದನ್ನು ಹೇಳಿರುವೆನಲ್ಲ.